

# ನೆನಪಿನ ದೋಣಿಯಲಿ..

ಎಂಬತ್ತೈದರ ಅಂಚಿನಲ್ಲಿರುವ ಹಳೆಯ ಅಧ್ಯಾಪಕರ ಆತ್ಮವಿಶ್ವಾಸ, ತಮ್ಮನ್ನು ಸ್ಮರಿಸಿಕೊಂಡು ಸನ್ಮಾನ ಮಾಡುತ್ತಿರುವುದರ ಬಗ್ಗೆ ಧನ್ಯತಾಭಾವ ಹಾಗೂ ಕಾಲೇಜಿನ ಹಿತದೃಷ್ಟಿಯಿಂದ ನುಡಿದ ಮಾತುಗಳು ನಮ್ಮೆಲ್ಲರ ಮನಗಳನ್ನು ತಟ್ಟಿದ್ದವು.

■ ಶಾರದಾ ವಿ. ಮೂರ್ತಿ

‘ಏಶಂಕ್ರೂ... ಹೊಟ್ಟೆ ಒಂದು ಬಂದಿರೋದು ಬಿಟ್ಟರೆ ಮತ್ತೆಲ್ಲಾ ಹಾಗೇ ಇದ್ದೀಯಲ್ಲೊ’.

‘ಕೂದಲು ಬೆಳ್ಳಗಾಗಿರದಿದ್ರೆ ನಿನಗೆ ವಯಸ್ಸಾಗಿರೋದೇ ಗೊತ್ತಾಗಲ್ವಲ್ಲೊ’

‘ಇನ್ನೂ ನಿನ್ನ ಕಂಠ ಅಷ್ಟೇ ಜೋರಾಗಿ ಇದೆಯಲ್ಲೊ... ನಾಲ್ಕು ಮೈಲಿ ದೂರ ಇದ್ದ್ರೂ ಕೇಳಿಸೋ ಹಾಗೆ...’

– ಹೀಗೆ ಪರಸ್ಪರ ತಮ್ಮ ಐವತ್ತು ವರ್ಷಗಳ ಹಿಂದಿನ ವಿದ್ಯಾರ್ಥಿ ಜೀವನದ ಸವಿನೆನಪಿನ ದೋಣಿಯಲ್ಲಿ ವಿಹರಿಸುವಂತೆ ಮಾಡಿದ್ದು 2017ರ ಮೇ ನಾಲ್ಕರಂದು ದಾವಣಗೆರೆಯ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಆ ವಿಶೇಷ, ವಿಶಿಷ್ಟ ಸಮಾರಂಭ. ಆ ಕಾಲೇಜಿನಲ್ಲಿ 1967 ರಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ಹಳೆಯ ವಿದ್ಯಾರ್ಥಿಗಳು, ಐವತ್ತು ವರ್ಷಗಳಾಗಿದ್ದಕ್ಕೆ ಈ ಸಮಾರಂಭವನ್ನು ಹಮ್ಮಿಕೊಂಡಿದ್ದರು. ಎಲ್ಲರೂ ಎಪ್ಪತ್ತರ ಗಡಿ ದಾಟಿದವರೆ. ಬೆಂಗಳೂರು, ಭದ್ರಾವತಿ, ಶಿವಮೊಗ್ಗ, ಬಳ್ಳಾರಿ, ದಾವಣಗೆರೆ ಅಲ್ಲದೆ ಗುಜರಾತಿನ ಬರೋಡ ಹಾಗೂ ಅಮೆರಿಕಾದಲ್ಲಿ ನೆಲೆಸಿದವರರೊಬ್ಬರು ಒಟ್ಟು 40 ಮಂದಿ ಹಳೆ ವಿದ್ಯಾರ್ಥಿಗಳು ಅಲ್ಲಿ ಸೇರಿದ್ದರು. ಪತ್ನಿ ಸಮೇತರಾಗಿ ಬರಬೇಕೆಂದು ನಿಶ್ಚಯವಾಗಿದ್ದರಿಂದ ನಾನೂ ನನ್ನ ಪತಿ ವಿಷ್ಣುಮೂರ್ತಿಯವರೊಂದಿಗೆ ಭಾಗವಹಿಸಿದ್ದೆ. ಒಂದಿಬ್ಬರು ಅದೇ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ್ದರು. ಒಬ್ಬರಿಂದೊಬ್ಬರು ಮಾಹಿತಿ ಪಡೆದು ಇಷ್ಟು ಮಂದಿ ಬರಲು ಸಾಧ್ಯವಾಯಿತು.ಬಂದಿದ್ದವರೆಲ್ಲರದೂ ನೆಮ್ಮದಿಯ ವಿಶ್ರಾಂತ ಜೀವನ. ಮಕ್ಕಳೆಲ್ಲರೂ ಉದ್ಯೋಗಸ್ಥರಾಗಿ, ಸಂಸಾರಸ್ಥರಾಗಿ ಸುಖದಿಂದಿದ್ದಾರೆ.

ರುಚಿಕಟ್ಟಾದ ದಾವಣಗೆರೆ ಬೆಣ್ಣೆ ಮಸಾಲೆ ದೋಸೆಯೊಂದಿಗೆ ಕಾರ್ಯಕ್ರಮ ಪ್ರಾರಂಭ. ಆ ಸಮಯದ ಮೂರು ಮಂದಿ ಅಧ್ಯಾಪಕರು, ವಿ.ಟಿ.ಯು. ಉಪ ಕುಲಪತಿಗಳಾದ ಕರಿಬಸಪ್ಪನವರು, ಈಗಿನ ಪ್ರಾಂಶುಪಾಲರು ಪ್ರಕಾಶ್ ವೇದಿಕೆಯಲ್ಲಿದ್ದುದು ಸಭೆಗೆ ವಿಶೇಷ ಮೆರುಗನ್ನುಂಟು ಮಾಡಿತ್ತು.

ಎಂಬತ್ತೈದರ ಅಂಚಿನಲ್ಲಿರುವ ಹಳೆಯ ಅಧ್ಯಾಪಕರ ಆತ್ಮವಿಶ್ವಾಸ, ತಮ್ಮನ್ನು ಸ್ಮರಿಸಿಕೊಂಡು ಸನ್ಮಾನ ಮಾಡುತ್ತಿರುವುದರ ಬಗ್ಗೆ ಧನ್ಯತಾಭಾವ ಹಾಗೂ ಕಾಲೇಜಿನ ಹಿತದೃಷ್ಟಿಯಿಂದ ನುಡಿದ ಮಾತುಗಳು ನಮ್ಮೆಲ್ಲರ ಮನಗಳನ್ನು ತಟ್ಟಿದ್ದವು. ಇಂತಹ ಒಂದು ಕಾಲೇಜಿನಲ್ಲಿ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ಹಾಗೂ ಮೌಲ್ಯಗಳನ್ನು ಬಿತ್ತಿ, ಸತ್ಪ್ರಜೆಗಳನ್ನಾಗಿ ರೂಪಿಸಿ ಬದುಕಿನಲ್ಲಿ ನೆಮ್ಮದಿಯನ್ನು ತಂದುಕೊಟ್ಟ ಕಾಲೇಜಿನ ಬಗ್ಗೆ ಎಲ್ಲರೂ ಕೃತಜ್ಞತೆಯಿಂದ ಸ್ಮರಿಸಿಕೊಂಡರು.

ಬಡತನವಿದ್ದರೂ ಕಲಿಯಲೇಬೇಕೆಂಬ ದೃಢಸಂಕಲ್ಪದಿಂದ ಶ್ರಮವಹಿಸಿ ಈ ಉನ್ನತ ಹುದ್ದೆಗೇರಿದ ಉಪಕುಲಪತಿಗಳು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, ತಮಗಿಂತ ಹಿರಿಯರಾದ ಹಳೆಯ ವಿದ್ಯಾರ್ಥಿಗಳೊಂದಿಗೆ ಬೆರೆಯುವಂತಹ ಈ ಸದವಕಾಶಕ್ಕಾಗಿ ಸಂತಸ ವ್ಯಕ್ತಪಡಿಸಿದರು.

ಈಗಿನ ವಿದ್ಯಾರ್ಥಿಗಳೊಂದಿಗೆ ಮಾತುಕತೆ, ಪ್ರಶ್ನೋತ್ತರವೂ ನಡೆಯಿತು. ‘ಐವತ್ತು ವರ್ಷಗಳ ನಂತರ ನೀವೂ ಹೀಗೆ ಈ ಕಾಲೇಜಿಗೆ ಬರುತ್ತೀರಲ್ಲವೆ..’ ಎಂದಾಗ ನಮ್ಮತ್ತ ದೃಷ್ಟಿಸಿದ ವಿದ್ಯಾರ್ಥಿಗಳ ಮೊಗದಲ್ಲಿ ಮಂದಹಾಸ.. ‘ಆಂ’ ಎಂದು ಕಕ್ಕಾಬಿಕ್ಕಿಯಾದವರೂ ಇದ್ದರು.

ಹಳೆಯ ವಿದ್ಯಾರ್ಥಿಯೊಬ್ಬರ ಮೂಲಕ ಬೆಂಗಳೂರಿನ ಎನ್.ಎ.ಎಲ್. ನಲ್ಲಿ ನಡೆಯುತ್ತಿರುವ ‘ಮರಳಿನಿಂದ ಸೌರಶಕ್ತಿ’ (ಸ್ಯಾಂಡ್ ಟು ಸೋಲಾರ್) ಪ್ರಾಜೆಕ್ಟ್‌ನ ಬಗ್ಗೆ ಈಗಿನ ವಿದ್ಯಾರ್ಥಿಗಳಿಗೆ ವಿವರಿಸಿ, ಆಸಕ್ತಿಯಿದ್ದವರಿಗೆ ಪ್ರಾಜೆಕ್ಟ್ ಮಾಡುವ ಅವಕಾಶ ಕಲ್ಪಿಸುವುದಾಗಿ ತಿಳಿಸಲಾಯಿತು.

ಕಾಲೇಜಿನ ಕಟ್ಟಡಗಳನ್ನು ಸುತ್ತು ಹಾಕಿ ತಾವು ಓದಿದ ತರಗತಿಯ ಕೊಠಡಿಗಳು, ಪ್ರಯೋಗ ಶಾಲೆಗಳು, ವಾಚನಾಲಯಗಳನ್ನು ತಮ್ಮ ಪತ್ನಿಯರಿಗೆ ತೋರಿಸಿ ಎಲ್ಲರೂ ಸಂಭ್ರಮಿಸಿದರು. ಐವತ್ತು ವರ್ಷಗಳ ನಂತರ ಎಲ್ಲ ಸಹಪಾಠಿಗಳನ್ನು ಮತ್ತೆ ವಿದ್ಯಾರ್ಥಿ ದೆಸೆಗೆ ಕೊಂಡೊಯ್ದ ಸ್ವರ್ಣ ಮಹೋತ್ಸವದ ಸಂಭ್ರಮ ಅವಿಸ್ಮರಣೀಯದಾದುದು. ■